ಊರೊಳಗಿರುವ ಗೆಳತಿಯರೆಲ್ಲ ಸಿಟಿಬಸ್ ಹಿಡಿದು ಹೊರಟ ಮೇಲೆ ಹಾಸ್ಟೆಲ್ ಹುಡುಗಿಯರೆಲ್ಲ ಸೇರಿ ಹೊರಟೆವು. ಕತ್ತಲಾಗಿದ್ದರಿಂದ ಯಥಾ ಪ್ರಕಾರ ಮೂರುನಾಲ್ಕು ಹುಡುಗರು ನಮ್ಮ ಬಾಡಿಗಾರ್ಡ್‌ಗಳಾಗಿ ಬಂದರು. ಇವನೂ, ನಾನೂ ಸಹಜವಾಗಿಯೇ ಸ್ವಲ್ಪ ಹಿಂದೆ ನಡೆಯುತ್ತಿದ್ದೆವು. ಫೇರ್‌ವೆಲ್‌ನಲ್ಲಿ ನಂತರ ಕ್ಯಾಂಟೀನಲ್ಲಿ ಕೂಡ ಸತ್ಯಭಾಮಾ ಅವನ ಬೆನ್ನಹಿಂದೇ ಬಿದ್ದಿದ್ದಳು. ಅವರಿಬ್ಬರ ಮಾತು, ಅಬ್ಬರ ನನಗೇಕೋ ನುಂಗಲಾರದ ತುತ್ತಾಗಿತ್ತು. ಜೊತೆಗೇ ಇವನ ಜೋರುಜೋರಾದ ನಗುವನ್ನು ಅರಗಿಸಿಕೊಳ್ಳುವ ಔದಾರ್ಯ, ಶಕ್ತಿ ಎರಡೂ ನನ್ನಲ್ಲಿರಲಿಲ್ಲ. ''ಏನು, ಸತ್ಯಭಾಮೆಯ ಜೊತೆಯಲ್ಲಿ ಜೋರು ಮಾತು ನಡೆದಿತ್ತಲ್ಲ? ಏನು ಕೇಳ್ತಾ ಇದ್ಲು?'' ಅಂದೆ. ಅವನೂ ನಗುತ್ತ, ''ಏನಿಲ್ಲಪ್ಪ, ಪ್ರಪೋಸ್ ಮಾಡಿದ್ಲು'' ಅಂದ. ನನ್ನ ಮೈಯೆಲ್ಲಾ ಮರಗಟ್ಟಿದಂತಾಯ್ತು. ಆದರೂ ಛಲಕ್ಕೆ ಬಿದ್ದವಳಂತೆ, ''ಉತ್ತರಾ ಏನು ಹೇಳಿದ್ರೋ?'' ಅಂದೆ. ಅವನು ಮತ್ತೆ ಅದೇ ಸ್ಟೈಲಲ್ಲಿ ನಗುತ್ತಾ, ''ಎಂಟು ದಿನ ಟೈಮ್ ಕೊಡ್ರಿ, ಯೋಚನೆ ಮಾಡಿ ಹೇಳ್ತೀನಿ ಅಂದೆ'' ಅಂದ. ಯಾಕೋ ತಿಂದದ್ದೆಲ್ಲ ಮೇಲೆ ಬಂದಂತಾಗಿ ಓಡಿದೆ. ಹಾಸ್ಟೆಲ್ ಹತ್ತಿರವೇ ಇತ್ತು. ರಸ್ತೆಬದಿಯಲ್ಲಿಯೇ ಕುಳಿತು ಗಟಾರಿನಲ್ಲಿ ಎಲ್ಲಾ ವಾಂತಿ ಮಾಡಿಕೊಂಡೆ. ಕಣ್ಣು, ಮೂಗಿನಲ್ಲೆಲ್ಲ ಹುಳಿಹುಳಿ ನೀರು. ನಿಶ್ಶಕ್ತಿಯಿಂದ ಮೈಯೆಲ್ಲ ನಡುಗಲಾರಂಭಿಸಿತು. ಗೆಳತಿಯರು ಓಡಿಬಂದು ಎಬ್ಬಿಸಿಕೊಂಡು ಕೆಳಮಹಡಿಯ ಒಂದು ರೂಮಿನಲ್ಲಿ ಮಲಗಿಸಿದರು. ಸುಮಾರು ಹೊತ್ತಿನ ಮೇಲೆ ಮೈಯಲ್ಲಿ ಸ್ವಲ್ಪ ಶಕ್ತಿ ಬಂದಂತಾಯಿತು. ಎದ್ದು ಮುಖ ತೊಳೆದು ಕಾಲೆಳೆಯುತ್ತ ಮಹಡಿ ಹತ್ತತೊಡಗಿದೆ.

''ಏನಾಯ್ತು? ತಿಂದಿದ್ದು ಪಚನವಾಗಲಿಲ್ಲವೇನೋ! ನಡಿ, ನನ್ನ ಗುರುತಿನ ಡಾಕ್ಟರಿದ್ದಾನೆ ಸಿಟಿ ಒಳಗೆ, ಕರ್ಕೊಂಡು ಹೋಗ್ತೀನಿ'' ಅಂತ ಮರುದಿನ ಬೆಳಿಗ್ಗೆ ಬೆಳಿಗ್ಗೆನೇ ಭಾಮಾ ಓಡಿಬಂದಳು. ನಾನು ಅವಳ ಕಡೆ ತಿರುಗಿಯೂ ನೋಡಲಿಲ್ಲ. ಅವಳ ಮಾತು ನನಗಲ್ಲವೇ ಅಲ್ಲ ಎನ್ನುವಂತೆ ಮುಖ ತಿರುಗಿಸಿ ಮಲಗಿಯೇ ಇದ್ದೆ. ಕೆಳಗಿನ ಮಹಡಿಯಲ್ಲಿ ಅವಳ ಜೋರು ಬಾಯಿ ಕೇಳುತ್ತಿತ್ತು, ''ಏನೋ ಡಾಕ್ಟರ್ ಹತ್ರ ಕರೆದುಕೊಂಡು ಹೋಗೋಣ ಅಂದ್ರೆ ಕೊಬ್ಬು ನೋಡು ಅವಳಿಗೆ. ಸಾಯಕೊಳ್ಳಿ ನನಗೇನು?'' ಯಾವುದೇ ಪ್ರತಿಕ್ರಿಯೆ ತೋರಿಸುವುದೂ ಬೇಡವಾಗಿತ್ತು. ಬಿಕ್ಕಿ ಬಿಕ್ಕಿ ಅಳಬೇಕೆನಿಸುತ್ತಿತ್ತು. ಆರಾಮಿಲ್ಲದ ನೆಪ ಮಾಡಿಕೊಂಡು ಒಂದಿಷ್ಟು ಕಣ್ಣೀರು ಹರಿಸಿದೆ. ಮಧುರಾ ಸುಮ್ಮನೆ ಕುಳಿತು ನನ್ನ ಬೆನ್ನು ಸವರುತ್ತಿದ್ದಳು.

ಮರುದಿನ ನಾನು ಲೈಬ್ರರಿಗೆ ಹೋಗಲಿಲ್ಲ. ಇನ್ನು ಮೇಲೆ ರೂಮಿನಲ್ಲೇ ಕುಳಿತು ಓದಬೇಕು. ಯಾವುದಾದರೂ ಪುಸ್ತಕ ಬೇಕಾದರೆ ಹೋಗಿ ಕಾರ್ಡ್ ಮೇಲೆ ತಂದರಾಯಿತು. ಸಂಜೆ ಆರು ಗಂಟೆಯ ಹೊತ್ತಿಗೆ ಗೆಳತಿಯರು ಕೆಳಗಿನಿಂದ ಕೂಗುತ್ತಿದ್ದರು. ಹೊರಗೆ ಕಾಂಪೌಂಡ್ ಬಳಿ ಒರಗಿ ನಿಂತ ಅವನು. ಸುಮ್ಮನೆ ಹೋಗಿ ನಿಂತೆ. ''ನಿನ್ನೆ ಅಷ್ಟು ಕೂಗಿದ್ರೂ ಓಡಿಹೋಗಿಬಿಟ್ರಲಾ! ಆರಾಮಿಲ್ಲಾಂತ ಮಧುರಾ ಹೇಳಿದ್ರು. ಲೈಬ್ರರಿಗೂ ಬರಲಿಲ್ಲ?'' ಉತ್ತರಿಸಬೇಕು ಅನಿಸಲಿಲ್ಲ. ''ನಿನ್ನೆ ಸುಮ್ನೆ ಜೋಕ್ ಮಾಡಿದ್ನಪ್ಪಾ'' ಅಂತ ಅವ ಹೇಳಿದರೂ ನನ್ನ ಮೂಡು ಬದಲಾಗಲಿಲ್ಲ. ''ಪೂರಿ ಬಹಳ ಆಯ್ಲಿ ಆಗಿತ್ತು, ಮೇಲೆ ಕೂರ್ಮಾ ಸಹಿತ ಸ್ಪೈಸಿ ಇತ್ತು, ಹಂಗಾಗಿ ಜೀರ್ಣವಾಗಲಿಲ್ಲ, ಹೊಟ್ಟೆ ತೊಳಸಿ ವಾಂತಿ ಆಯ್ತು ಅಷ್ಟೇ'' ಅಂದೆ. ನಿನ್ನೆಯ ಅವನ ಮಾತುಗಳಿಂದ ನನಗೆ ಬೇಜಾರಾಗಿದೆ ಅಂದುಕೊಳ್ಳುವುದು ಬೇಡ. ಅವನು ಯಾರೊಡನೆ ಸುತ್ತಾಡಿದರೆ ನನಗೇನು? ನನ್ನ ಅವನ ಸಂಬಂಧವಾದರೂ ಏನು? ಇಬ್ಬರೂ ಡಿಫೈನ್ ಮಾಡಿಲ್ಲ.

ಪರೀಕ್ಷೆಗಳು ಮುಗಿದವು. ಎರಡು ವರ್ಷಗಳ ಹಾಸ್ಟೆಲ್ ಜೀವನ, ಹಾಸ್ಟೆಲ್ ಗೆಳತಿಯರ